www.ecourtsindia.com

## 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.4714/2021

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಇಂದಿರಾ** | | |
| **ಗಂಡನ ಹೆಸರು** | **ರಾಮಕೃಷ್ಣ** | | |
| **ವಯಸ್ಸು:** | **38 ವರ್ಷ** | **ಡಿಡಬ್ಲೂ:** | **1** |
| **ಉದ್ಯೋಗ:** | **ಕೂಲಿ** | | |
| **ವಾಸ ಸ್ಥಳ:** | **ಹಂಚಿನಾಳ ಕ್ಯಾಂಪ್.** | | |

**ದಿನಾಂಕ 20-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ. ಕೆ. ವಿ. ಎಸ್. ವಕೀಲರಿಂದ**

2018 ರಲ್ಲಿ ನನ್ನ ತಾಯಿ ದೂರುದಾರರ ಸಂಘದಿಂದ ರೂ.30,000/- ಸಾಲವನ್ನು ಪಡೆದಿದ್ದರು. ಜಾಮೀನಿಗಾಗಿ 1 ಚೆಕ್ಕನ್ನು ಕೊಡುವಂತೆ ಕೇಳಿದ್ದರು, ಅದರಂತೆ ನಾನು ಚೆಕ್ಕನ್ನು ಕೊಟ್ಟಿದ್ದೆ. ಸಾಲ ಪಡೆದ ಒಂದೂವರೆ ವರ್ಷದ ಒಳಗೆ ಅಸಲು ಮತ್ತು ಬಡ್ಡಿಯನ್ನು ಕಟ್ಟಿದ್ದೆವು. ನಂತರ ನಾನು ಅವರಿಗೆ ಕೊಟ್ಟ ದಾಖಲಾತಿಗಳನ್ನು ಮತ್ತು ಚೆಕ್ಕನ್ನು ಮರಳಿ ಕೇಳಿದ್ದೆ, ಆದರೆ ಅವರು ನಿಮ್ಮ ದಾಖಲಾತಿಗಳು ಮಿಸ್ ಆಗಿವೆ, ಕೊಡುತ್ತೇವೆ ಎಂದು ಹೇಳಿದ್ದರು. 2-3 ಸಲ ಕೇಳಿದರೂ ಸಹ ಅವರು ಕೊಡಲಿಲ್ಲ, ನಂತರ ನಾನು ಬ್ಯಾಂಕಿಗೆ ಹೋಗಿ ಪಾಸ್ ಬುಕ್ಕನ್ನು ಕೊಟ್ಟು ಎಲ್ಲವನ್ನು ಕ್ಲೋಸ್ ಮಾಡಿಕೊಂಡು ಬಂದಿದ್ದೆವು. 2021 ರಲ್ಲಿ ನಮ್ಮ ವಿರುದ್ಧ ಈ ಪ್ರಕರಣ ಹೂಡಿರುತ್ತಾರೆ. ಈ ಪ್ರಕರಣ ಹಾಕುವುದಕ್ಕಿಂತ ಮುಂಚೆ ನನಗೆ ಯಾವುದೇ ನೋಟೀಸು ಬಂದಿಲ್ಲ, ಬ್ಯಾಂಕಿನವರೂ

This is a True Copy of the Court Records Online. Authenticated @ districts.ecourtsindia.com/cnr/KARC510080562021/truecopy/order-1.pdf

ಸಹ ನಮ್ಮ ಮನೆಗೆ ಬಂದು ಏನನ್ನೂ ಕೇಳಿರುವುದಿಲ್ಲ. 2021 ರಲ್ಲಿ ಈ ಕೇಸ್ ಮಾಡಿರುತ್ತಾರೆ. ನನಗೆ ಕನ್ನಡ ಅಷ್ಟೋಂದು ಬರುವುದಿಲ್ಲ, ನೀವೇ ಈ ಪ್ರಕರಣದಿಂದ ಖುಲಾಸೆಗೊಳಿಸಬೇಕೆಂದು ಪ್ರಾರ್ಥನೆ.

**ಪಾಟೀಸವಾಲುಃ ಶ್ರೀ.ಆರ್. ವಿ. ಹೆಚ್. ಆರೋಪಿ ಪರ ವಕೀಲರಿಂದಃ–**

**ಶ್ರೀ. ಆರ್. ಬಿ. ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

2 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.

This is a True Copy of the Court Records Online. Authenticated @ districts.ecourtsindia.com/cnr/KARC510080562021/truecopy/order-1.pdf

www.ecourtsindia.com